# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಟಮಕ, ಕೋಲಾರ– 563 103

**ಇಮೇಲ್**:registrar@bnu.ac.in **ಕಛೇರಿದೂರವಾಣಿ: 08152 243152/53**


ವಿ.ವಿ.ಸಂಖ್ಯೆ: ಬೆಂ.ಉ.ವಿ.ವಿ/ಕು.ಸ.ಕಾ/ 1680 /2025-26 ದಿನಾಂಕ: 24.09.2025

**ಪರಿಷ್ಕೃತ ಸುತ್ತೋಲೆ**

**ವಿಷಯ:** 2025-26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ ಪ್ರವೇಶಾತಿಯನ್ನು UUCMS Portal ಮುಖಾಂತರ ಮಾಡಿಕೊಳ್ಳುವ ದಿನಾಂಕವನ್ನು ವಿಸ್ತರಿಸಿರುವ ಬಗ್ಗೆ.

**ಉಲ್ಲೇಖ:**
1. ಸಂಖ್ಯೆ: ಬೆಂ.ಉ.ವಿ.ವಿ/ಶೈಕ್ಷಣಿಕವಿಭಾಗ/1643/2025-26 ದಿನಾಂಕ:18.09.2025
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24.09.2025

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರಲ್ಲಿ ನಮೂದಿಸಿರುವ ವಿಶ್ವವಿದ್ಯಾಲಯದ ಸುತ್ತೋಲೆ ಅನುಸಾರ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶಾತಿಗೆ ದಿನಾಂಕ: 20.09.2025ರಂದು ಕೊನೆ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ.

ಮುಂದುವರೆದು, ಹಲವು ವಿದ್ಯಾರ್ಥಿಗಳು & ಪೋಷಕರು ಪ್ರವೇಶಾತಿಗೆ ಅವಕಾಶ ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ ಹಾಗೂ ದ್ವಿತೀಯ ಪಿಯುಸಿಯ ಪೂರಕ ಪರೀಕ್ಷೆಗಳಲ್ಲಿ ತೇರ್ಗಡೆಗೊಂಡ ಅಭ್ಯರ್ಥಿಗಳು ಹಾಗೂ ತಾಂತ್ರಿಕ ಮತ್ತು ವೃತ್ತಿಪರ ಕೋರ್ಸುಗಳಿಂದ ಸಾಂಪ್ರದಾಯಕ ಪದವಿಗಳಿಗೆ ಪ್ರವೇಶ ಹೊಂದಲು ಆಸಕ್ತ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ **2025-26ನೇ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶಾತಿಗೆ ದಿನಾಂಕ: 26.09.2025ರವರೆಗೆ ವಿಸ್ತರಿಸಲಾಗಿದೆ.** ಈ ವಿಸ್ತರಣೆ ಅವದಿಯಲ್ಲಿ ದಾಖಲಾತಿ ಪಡೆದುಕೊಂಡ ವಿದ್ಯಾರ್ಥಿಗಳಿಗೆ ಪೂರಕ ವಿಶೇಷ ತರಗತಿಗಳನ್ನು ನಡೆಸಿ, ಹಾಜರಾತಿ ಹಾಗೂ ಪಠ್ಯಕ್ರಮಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಂಯೋಜಿತ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ. ಮುಂದುವರೆದು, 2025-26ನೇ ಸಾಲಿಗೆ ಸ್ನಾತಕ ಪದವಿಗಳ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳನ್ನು **UUCMS ಪೋರ್ಟಲ್‌ನಲ್ಲಿ ದಿನಾಂಕ: 26.09.2025ರೊಳಗೆ ಕಡ್ಡಾಯವಾಗಿ ಅಪ್ಲೋಡ್** ಮಾಡಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ವಿ.ಸೂ: ಪ್ರಥಮ ವರ್ಷದ ಸ್ನಾತಕ ಪದವಿಗಳ ಪ್ರವೇಶಾತಿ ವಿವರಗಳನ್ನು ಮೇಲೆ ಸೂಚಿಸಿರುವ ದಿನಾಂಕದೊಳಗೆ **UUCMS ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್ಲೋಡ್ ಮಾಡಬೇಕಾಗಿರುತ್ತದೆ. ಅಂತಿಮ ದಿನಾಂಕದ ನಂತರ** ಪ್ರವೇಶಾತಿ ಅವಧಿಯನ್ನು ಯಾವುದೇ ಕಾರಣಕ್ಕೂ ವಿಸ್ತರಿಸುವುದಿಲ್ಲವೆಂದು ಈ ಮೂಲಕ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

ಕುಲಸಚಿವರು

**ಕುಲಸಚಿವರು**
**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**
**ಟಮಕ, ಕೋಲಾರ, ಕರ್ನಾಟಕ-563 103.**

**ಇವರಿಗೆ,**

ಪ್ರಾಂಶುಪಾಲರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಸ್ನಾತಕ ಕಾಲೇಜುಗಳು.

ಪ್ರತಿಗಳು:

1. ಆಪ್ತಶಾಖೆ, ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ
2. ಕುಲಸಚಿವರು (ಮೌ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
3. ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
4. ನೋಡಲ್ ಅಧಿಕಾರಿ, ಯು.ಯು.ಸಿ.ಎಂ.ಎಸ್ (ಪ್ರವೇಶಾತಿ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ. (ಅಗತ್ಯ ಕ್ರಮವಹಿಸಲುಸೂಚಿಸಿದೆ)
5. ಕಛೇರಿಪ್ರತಿ.